

# ಎಮ್ಮೆ ಕರುಳಿನ ತೋರಣ

ನೇಪಾಳದ ಕಠ್ಮಂಡುವಿನ ಪಠಾಣ್ ದರ್ಬಾರಿನಲ್ಲಿರುವ ದುರ್ಗಾದೇವಿಯ ದೇಗುಲದ ಬಾಗಿಲಿನ ಸುಂದರ ಕೆತ್ತನೆಯನ್ನು ನೋಡುತ್ತಿರುವಾಗ ಅಲ್ಲಿಯ ಮಾರ್ಗದರ್ಶಿ ‘ಆ ತೋರಣವನ್ನು ಗಮನಿಸಿ; ಅದು ಎಮ್ಮೆಯ ಕರುಳಿನ ತೋರಣ’ ಎಂದಾಗ ನೋಡಿ ಬೆಕ್ಕಸ ಬೆರಗಾದೆವು. ಬಹುತೇಕ ಹಿಂದೂ ದೇಗುಲಗಳನ್ನು ಹೊಂದಿರುವ ಆವರಣದ ಈ ದೇಗುಲದಲ್ಲಿ ವರ್ಷಕ್ಕೊಮ್ಮೆ ನಡೆಯುವ ಜಾತ್ರೆಯಲ್ಲಿ ನೂರೆಂಟು ಎಮ್ಮೆ, ಕುರಿಗಳನ್ನು ಬಲಿಕೊಟ್ಟು ಕರುಳನ್ನು ತೋರಣ ಕಟ್ಟುತ್ತಾರಂತೆ. ಪ್ರಾಣಿ ಹತ್ಯೆ ಮಹಾಪಾಪ ಎನ್ನುವುದನ್ನು ಜನಗಳ ಕಣ್ಣು ಅರಿಯದಿದ್ದರೂ ದುರ್ಗಾ ಮಾತೆಯ ಕರುಳಾದರೂ ಅರಿತಿದ್ದರೆ ಒಳ್ಳೆಯದಿತ್ತೇನೋ ಎನ್ನಿಸಿತು.

–ವಾ. ಮುರಳೀಧರ, ತೀರ್ಥಹಳ್ಳಿ





# ‘ತಿರಮುರಿ’ ಕಂಬ ತಿಳಿದಿರಾ?

‘ನಿಂತ ನೀರಿನಲ್ಲಿ ಕ್ರಿಮಿ ಜನಿಸುತ್ತದೆ. ಕೆಲಸವಿಲ್ಲದ ಮನುಷ್ಯನಲ್ಲಿ ಕೆಟ್ಟ ವಿಚಾರಗಳು ಹುಟ್ಟುತ್ತವೆ’ ಎನ್ನುವ ಅನುಭವಿಗಳ ಮಾತಿನಲ್ಲಿ ಸತ್ಯ ಅಡಗಿದೆ. ನಮ್ಮ ಪೂರ್ವಜರು ಕ್ರಿಯಾಶೀಲರಾಗಿದ್ದರಿಂದಲೇ ಯಾವ ವೈದ್ಯಕೀಯ ಸವಲತ್ತುಗಳು ಇಲ್ಲದೆ ನೂರು ವರ್ಷಗಳ ಕಾಲ ಬದುಕಿದ ಹಲವಾರು ಉದಾಹರಣೆಗಳಿವೆ. ಅದಕ್ಕೊಂದು ಸ್ಪಷ್ಟ ನಿದರ್ಶನ ಎಂಬಂತೆ ಇದೆ ‘ತಿರಮುರಿ’ ಕಂಬ.

ಮನೆಯ ಮಾಳಿಗೆಯ ಮರದ ಏಣಿಯ ಎಡ ಬಲಗಳಲ್ಲಿ, ತೆಣೆಯ ಕಟಾಂಜಣ, ಮಾಳಿಗೆಯ ಮುಂದೆ ಅಲಂಕಾರಕ್ಕಾಗಿ ಹಾಗೂ ರಕ್ಷಣೆಗಾಗಿ ನಿರ್ಮಿಸಿದ ಕಂಬಗಳಲ್ಲಿ ಒಂದೆರಡು ತಿರಮುರಿ ಕಂಬಗಳು ಇರುತ್ತಿದ್ದವು. ಬಳ್ಳಿಯನ್ನು ಗಂಟು ಹಾಕಿದ ಹಾಗೆ ಒಂದೇ ಕಟ್ಟಿಗೆಯಿಂದ ಈ ತಿರಮುರಿ ಕಂಬವನ್ನು ತಯಾರಿಸಲು ಸಾಕಷ್ಟು ತಾಳ್ಮೆ, ನೈಪುಣ್ಯ, ಕ್ರಿಯಾಶೀಲತೆ ಬೇಕು. ಹಿಂದಿನ ಕಾಲದಲ್ಲಿ ಆಧುನಿಕ ಯಂತ್ರಗಳು ಇಲ್ಲದ ಸಮಯದಲ್ಲಿ ಈ ತಿರಮುರಿ ಕಂಬ ನಿರ್ಮಾಣ ಮಾಡಬೇಕಾದರೆ ಹಲವಾರು ದಿನಗಳೇ ಹಿಡಿಯುತ್ತಿತ್ತು. ಮತ್ತಿ, ಸಾಗುವಾನಿ, ಬಿಳಿ ದೇವದಾರು, ದೇವದಾರು ಮುಂತಾದ ಕಟ್ಟಿಗೆಗಳಿಂದ ಈ ತಿರಮುರಿ ಕಂಬಗಳನ್ನು ತಯಾರಿಸುತ್ತಿದ್ದರು. ಕೃಷಿಕರು ಕೂಡ ಈ ತಿರಮುರಿ ಕಂಬ ತಯಾರಿಸುತ್ತಿದ್ದರು ಎಂಬುದು ಇನ್ನೊಂದು ವಿಶೇಷ.

–ಬೀರಣ್ಣ ನಾಯಕ ಮೊಗಟಾ

